ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

4ೇ ವರ್ಷ 34ನೇ ಸಂಚಿಕೆ ಕೊಪ್ಪ 27-4-1986 ಭಾನುವಾರ ಬೆಲೆ 40 ಪೈಸೆ

'ಭಿಕ್ಷಾಂದೇಹಿ ಸಂಸ್ಕೃತಿಯವರಾಗಬೇಕಿಲ್ಲ'

(ವರದಿ: ಶೃಂಗೇಶ್ವರ ಶರ್ಮ)

ಶೃಂಗೇರಿ: ಯಾವ ಕ್ಷೇತ್ರದಲ್ಲಿಯೇ ಆಗಲಿ, ತಂತ್ರಜ್ಞಾನದಿಂದ ಹಿಡಿದು ಪ್ರತಿಯೊಂದನ್ನೂ ಹೊರಗಿನವರಿಂದ ದೇಹಿ ದೇಹಿ ಎಂದು ಪಡೆಯುವ ನಮ್ಮದು ಒಂದು ರೀತಿಯ ಮಾನಸಿಕ ದಾಸ್ಯ. ಇದನ್ನು ನಾವು ಬ್ಯಾಂಕಿಂಗ್ ಕ್ಷೇತ್ರಕ್ಕೆ ತರಬಾರದು. ನಾವು ಎಂದೂ 'ಭಿಕ್ಷಾಂದೇಹಿ' ಸಂಸ್ಕೃತಿಯವರಾಗಬೇಕಿಲ್ಲ ಎಂದು ಪ್ರಸಿದ್ಧ ಅಂಕಣ ಬರಹಗಾರರೂ, ಅರ್ಥಶಾಸ್ತ್ರಜ್ಞರೂ ಆದ ಎಚ್ಚೆಸ್ಕೆ (ಪ್ರಾ. ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್) ನುಡಿದರು. 6 ದಿನಗಳ ಕಾಲ ಇಲ್ಲಿ ನಡೆದ ಒಂಭತ್ತನೇ 'ಬ್ಯಾಂಕಿಂಗ್ ಕಮ್ಮಟ'ದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ಬ್ಯಾಂಕಿಂಗ್ ಬಗ್ಗೆ ಇತರ ಭಾರತೀಯ ಭಾಷೆಗಳಲ್ಲಿ ಇಲ್ಲದಿರುವುದನ್ನು ಇಂಥ ಕಮ್ಮಟಗಳ ಮೂಲಕ ನಾವು ಕನ್ನಡದಲ್ಲಿ ಮಾಡುತ್ತಿದ್ದೇವೆ. ಬ್ಯಾಂಕಿನ ಸಂಪೂರ್ಣ ವ್ಯವಹಾರಗಳಲ್ಲಿ ಒಳಸಲು ಕನ್ನಡ ಇಂದು ಸಿದ್ಧವಾಗಿದೆ ಎಂಬುದನ್ನು ಸಾಧಿಸಿದ್ದೇವೆ ಎಂದೂ ನುಡಿದರು. ತಹಸೀಲ್ದಾರ್ ಪ್ರಭಾಕರ ಶರ್ಮ ಮುಖ್ಯ ಅತಿಥಿಗಳಾಗಿದ್ದರು.

ಉತ್ತಮ ಹವೆ ಉತ್ಸಾಹ ಶೀಲ ರೈತಾಪಿ:

ಮಲೆನಾಡಿನ ಜನಜೀವನಕ್ಕೆ ಜೀವ ತುಂಬಬಲ್ಲ ಹೈನುಗಾರಿಕೆ ಪ್ರಗತಿಗೆ ಹಾಸನ ಡೈರಿ ಅಧಿಕಾರಿಗಳ ಅಡ್ಡಗಾಲು?

ಎಂ. ಆರ್. ಕಣ್ಣನ್
ಮೇಲಿನಪೇಟೆ, ಕೊಪ್ಪ.

ಮಲೆನಾಡಿನಲ್ಲಿ ಹೈನುಗಾರಿಕೆ ಒಂದು ಸಮಗ್ರ ಉದ್ಯಮವಾಗಿ ಬೆಳೆಯಲು ಉತ್ತಮ ಅವಕಾಶಗಳಿವೆ. ಬರೀ ಗೊಬ್ಬರಕ್ಕಾಗಿ, ಸಗಣಿಗಾಗಿ ಜಾನುವಾರುಗಳನ್ನು ಸಾಕುತ್ತಿದ್ದವರೂ ಸಹ ಸ್ವಲ್ಪ ಹೆಚ್ಚಿನ ಹಾಲು ಉತ್ಪಾದಿಸಲು ಆರಂಭಿಸಿ ಅದನ್ನು ಒಂದು ಉಪಕಸುಬನ್ನಾಗಿ ನಡೆಸುತ್ತಿರುವುದನ್ನು ಕಾಣಬಹುದು. ಇದಕ್ಕೆ ಪೂರಕವಾಗಿ ಜಾನುವಾರುಗಳನ್ನು ಹೆಚ್ಚಾಗಿ ಸಾಕುವುದರಿಂದ ಕೃಷಿ ಉತ್ಪನ್ನಗಳೂ ಅಧಿಕಗೊಳ್ಳುವುದನ್ನು ಕಾಣಬಹುದಾಗಿದೆಯಲ್ಲದೆ ಹೆಚ್ಚು ಹೆಚ್ಚಾಗಿ ಗೊಬ್ಬರ ಅನಿಲ ಯಂತ್ರಗಳು ಸ್ಥಾಪಿಸಲ್ಪಡುತ್ತಿರುವುದರಿಂದ ಕಾಡಿನ ವಿನಾಶವನ್ನು ಸಹ ರೈತರು ಕಡಿಮೆ ಮಾಡುವತ್ತ ಸಹಕರಿಸುತ್ತಿರುವುದನ್ನು ಕಾಣಬಹುದಾಗಿದೆ.

ಉತ್ತಮ ಹವಾಮಾನ

ತಜ್ಞರು ಮತ್ತು ಪಶುವೈದ್ಯರ ಅಭಿಪ್ರಾಯದಂತೆ ಮಲೆನಾಡಿನ ಹವಾಮಾನ ಡೈರಿ ಉದ್ಯಮಕ್ಕೆ ಉತ್ತಮವಾಗಿದ್ದು ಹಾಲು ಉತ್ಪಾದನೆಯನ್ನು ಒಂದು ದೊಡ್ಡ ಉದ್ಯಮವನ್ನಾಗಿ ಪರಿವರ್ತನೆ ಮಾಡಬಹುದಾದ ಹಂತದಲ್ಲಿ ಮಲೆನಾಡಿನ ಹಾಲು ಉತ್ಪಾದಕರು ಇದ್ದಾರೆ.

ಆದರೆ ಈ ಉದ್ಯಮಕ್ಕೆ ಸಬಂಧಿಸಿದ ಅಧಿಕಾರಿಗಳು, ಸಂಸ್ಥೆಗಳು ಮಾತ್ರ ಹಾಲು ಉತ್ಪಾದಕರನ್ನು ತೀರ ಶೋಚನೀಯ ಸ್ಥಿತಿಗೆ ತರುತ್ತಿದಾರೆ.

"ಬಾಯಿ ಪಟಾಕಿ"

"ಕ್ಷೀರ ಕ್ರಾಂತಿ" ಇತ್ಯಾದಿಗಳು ಕೇವಲ ಬಾಯಿ ಪಟಾಕಿಗಳಾಗಿವೆ. ಸುಮಾರು 4 ವರ್ಷದ ಹಿಂದೆ **ಬಾಳೆಹೊನ್ನೂರಿನಲ್ಲಿ** ಒಂದು ಶೀತಲೀಕರಣ **ಕೇಂದ್ರ** ತೆರೆಯುವಾಗ ಸಂತಸ ಪಟ್ಟವರಲ್ಲಿ **ನಾನೂ** ಒಬ್ಬ. ಆದರೆ, ಅಧಿಕಾರಿಗಳ ಅಸಡ್ಡೆಯಿಂದ ಸಾವಿರಾರು ಜನರು ತೊಂದರೆಗೆ ಒಳಗಾಗಿದ್ದರೂ, ಲಕ್ಷಾಂತರ ರೂಪಾಯಿಗಳು ವ್ಯರ್ಥವಾಗಿದ್ದರೂ ಅದಕ್ಕೆ ಬಲಿಪಶುಗಳು ಹಾಲು ಉತ್ಪಾದಕರೇ ವಿನಃ ತಮ್ಮ ಮನ ಬಂದಂತೆ ವರ್ತಿಸಿದ ಅಧಿಕಾರಿಗಳಲ್ಲ ಎಂಬ ಪ್ರವರ್ತನೆ ಇರುವುದು ನಮ್ಮ ಸಮಾಜದಲ್ಲಿನ ವಿಪರ್ಯಾಸ.

ಈ ಮೇಲೆ ಕಾಣಿಸಿದ ವಿಷಯಗಳು ಒಂದು ಕಡೆ ಇರಲಿ.

ಅಸಡ್ಡೆ - ಖಂಡನೆ

ಇಲ್ಲಿನ ಹಾಲು ಉತ್ಪಾದಕರ ಸಮಸ್ಯೆಗಳನ್ನು ಚರ್ಚಿಸಲು ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ (ಕೆ. ಎಂ. ಎಫ್.) ಇವರು ತಮ್ಮ 8-4-86ರ ಸುತ್ತೋಲೆಯ ಅನ್ವಯ ಬಾಳೆಹೊನ್ನೂರಿನ ಪ್ರವಾಸಿ ಮಂದಿರದಲ್ಲಿ ತಾ|| 24-4-86ರಂದು ಬೆಳಿಗ್ಗೆ 11 ಗಂಟೆಗೆ ಹಾಲು ಉತ್ಪಾದಕರ ಸಭೆಯನ್ನು ಕರೆದಿದ್ದರು. ಅಂದು ಗುಡ್ಡೇತೋಟ, ಬಿಳಾಲುಕೊಪ್ಪ, ಬಸರಿಕಟ್ಟೆ, ಜಯಪುರ, ಕೊಪ್ಪ, ಹರಿಹರಪುರ ಮುಂತಾದ ಕಡೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಆಗಮಿಸಿ ಮಧ್ಯಾಹ್ನ 2 ಗಂಟೆಯವರೆಗೂ ಕಾದರೂ ಹಾಸನದಿಂದ ಯಾವ ಅಧಿಕಾರಿಯೂ ಬರಲಿಲ್ಲ.

ಅಲ್ಲಿ ಸೇರಿದ್ದ ಹಾಲು ಉತ್ಪಾದಕರು ಹಾಸನ ಡೈರಿ ನಿಗಮದವರ ಈ ಉದಾಸೀನ ಪ್ರವೃತ್ತಿಯನ್ನು ಖಂಡಿಸಿದರಲ್ಲದೆ **ಇನ್ನೊಂದು ತಿಂಗಳ ಒಳಗಾಗಿ ಹಾಸನದ ಡೈರಿಯವರು ದಿನದ 2 ವೇಳೆಯಲ್ಲಿ ಅಂದರೆ ಬೆಳಿಗ್ಗೆ ಮತ್ತು ಸಂಜೆ ಹಾಲು ಸಂಗ್ರಹಣೆ ಮಾಡಲು ಮತ್ತು ಹಣ ಪಾವತಿ ಇತ್ಯಾದಿ ಬಗ್ಗೆ ಸರಿಯಾದ ವ್ಯವಸ್ಥೆ ಮಾಡದಿದ್ದಲ್ಲಿ ಹಾಸನದ ಡೈರಿ ನಿಗಮದ ಎದುರಿನಲ್ಲಿ ಅನಿರ್ದಿಷ್ಟ ಕಾಲ ನಿರಶನ ಸತ್ಯಾಗ್ರಹವನ್ನು ಕೈಗೊಳ್ಳಲು ತೀರ್ಮಾನಿಸಿದರು.** ಕನಿಷ್ಠ ಒಂದು ಟೆಲಿಗ್ರಾಂ ಮುಖಾಂತರವಾದರೂ ಅಂದಿನ ಸಭೆ ರದ್ದಾಗಿದ್ದುದನ್ನು ತಮ್ಮ ಬಾಳೆಹೊನ್ನೂರಿನ ಶಾಖೆಯ ಮುಖಾಂತರವಾದರೂ ರೈತರಿಗೆ ತಿಳಿಸಬಹುದಾಗಿತ್ತು. ಆದರೆ ಅಷ್ಟನ್ನೂ ಮಾಡದ ಹಾಸನದ ಅಧಿಕಾರಿಗಳು ರೈತರ ಬಗ್ಗೆ ತೋರಿದ ಅಸಡ್ಡೆಯ ಬಗ್ಗೆ ಎಲ್ಲರೂ ತೀವ್ರ ಸಂತಾಪಪಟ್ಟರು.

ನಮಗೆ ಈಗ ಬೇಕಾಗಿರುವುದು ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಅಧಿಕಾರ ಚಲಾಯಿಸುವ ಅಧಿಕಾರಿಗಳಲ್ಲ. ಜನಸಾಮಾನ್ಯರೊಂದಿಗೆ ಸಂಪರ್ಕ ಇಟ್ಟುಕೊಂಡು ಅವರ ಅನಿಸಿಕೆಗಳಿಗೆ ಸ್ಪಂದಿಸುವ ಅಧಿಕಾರಿಗಳು. **ಹಾಸನ ಡೈರಿಯವರು ಕರೆದಿದ್ದ ಈ ಸಭೆಯು ಗ್ರಹಣದ ದಿನದಂದು ಇದ್ದು, ಅದು ನಡೆಯದೇ ಇದ್ದುದು ಹಾಸನದ ಡೈರಿ ನಿಗಮಕ್ಕೆ ಹಿಡಿದಿರುವ ಗ್ರಹಣದ ಸಂಕೇತವಾಗಿತ್ತು.**

ಈ ಸಭೆಗೂ ಹಿಂದೆ ಅಂದರೆ ತಾ|| 26-10-85ರಂದು ಹಾಸನದ ಡೈರಿ ನಿಗಮದ ಉನ್ನತ ಅಧಿಕಾರಿಗಳು ಬಾಳೆಹೊನ್ನೂರಿಗೆ ಆಗಮಿಸಿ ಒಂದು ಸಭೆಯನ್ನು ಏರ್ಪಡಿಸಿದ್ದರು. ಅದರಲ್ಲಿ ಚಿಕ್ಕಮಗಳೂರಿನ ವಿಶೇಷ ಜಿಲ್ಲಾಧಿಕಾರಿ ರತ್ನಪ್ರಭಾ ಅವರೂ ಉಪಸ್ಥಿತರಿದ್ದರು. ಆ ಸಭೆಯಲ್ಲಿ ನಾನು, 2 ಹೊತ್ತೂ ಹಾಲು ಶೇಖರಣೆ ಆರಂಭಿಸಿದಲ್ಲಿ ಕೊಪ್ಪ ಸಿಂಡಿಕೇಟ್ ಬ್ಯಾಂಕಿನವರು 50 ದನಗಳನ್ನು ಕೊಳ್ಳಲು ವಿವಿಧ ಅರ್ಹ ವ್ಯಕ್ತಿಗಳಿಗೆ ಸಾಲ ಮಂಜೂರು ಮಾಡಲು ಖಾತ್ರಿಯಾಗಿ ಒಪ್ಪಿರುವುದನ್ನು ಅಧಿಕಾರಿಗಳ ಗಮನಕ್ಕೆ ತಂದುದಲ್ಲದೆ, ಕನಿಷ್ಠ 400 ಲೀ. ಹಾಲನ್ನು ಅವರಿಗೆ ಒದಗಿಸುವ ಭರವಸೆ ನೀಡಿದೆ. ಅದಕ್ಕೆ ಪ್ರತಿಯಾಗಿ ಅವರು ಜನವರಿ 86 ರಿಂದ 2 ಹೊತ್ತು ವಾಹನವನ್ನು ಏರ್ಪಡಿಸಿ ಹಾಲನ್ನು ಶೇಖರಿಸುವ ಭರವಸೆ ನೀಡಿದ್ದರು. ಆದರೆ ಅವರುಗಳ ಲೆಕ್ಕದಲ್ಲಿ ಇನ್ನೂ 1986ರ ಜನವರಿ ಬಂದಂತಿಲ್ಲ!

ಹಾಲಿನ ಶೇಖರಣೆಗೆ ಸಂಬಂಧಪಟ್ಟ ಕ್ಯಾನ್ ಇತ್ಯಾದಿ ಉಪಕರಣಗಳನ್ನು ಪಡೆಯಲು ಹಾಸನ ಡೈರಿಯವರಿಗೆ 2000 ರೂ. ಡಿಪಾಜಿಟ್ ಕಟ್ಟಬೇಕು ಎನ್ನಲಾಗಿದ್ದರಿಂದ ನಾವು 40 ಜನರ ಬಳಿ ತಲಾ 50ರಂತೆ ಒಟ್ಟು 2000 ರೂ. ಹಣವನ್ನು ಒಟ್ಟು ಮಾಡಿದ್ದೇವಲ್ಲದೆ ಈಗಲೂ ಆ ಹಣ ಖಜಾಂಚಿಯವರ ಬಳಿ ಇದೆ. ಆ ಹಣವನ್ನು ನಾವು ಅಂದಿನ ಸಭೆಯಲ್ಲಿ ಜಮಾ ಮಾಡಲು ಸಹ ಸಿದ್ಧರಿದ್ದೆವು.

ಆ ಸಮಯದಲ್ಲಿ ದೊರೆತ ಒಂದು ಮಾಹಿತಿಯ ಪ್ರಕಾರ ಆ ದಿನಗಳಲ್ಲಿ ಹಾಸನದ ಡೈರಿ ಘಟಕಕ್ಕೆ ದಿನವೊಂದಕ್ಕೆ ಆ ಘಟಕದ ಸಾಮರ್ಥ್ಯಕ್ಕಿಂತ 6 ಸಹಸ್ರ ಲೀಟರಿನಷ್ಟು ಅಧಿಕ ಹಾಲು ಸಂಗ್ರಹವಾಗುತ್ತಿದ್ದು ಬೇರೆ ಯಾವುದೇ ಉಪ ಉತ್ಪನ್ನಗಳನ್ನು ಸಹ

(4ನೇ ಪುಟಕ್ಕೆ)

ಸುಪ್ರೀಂ ಕೋರ್ಟ್ ತೀರ್ಪು: ನುಣುಚಿಕೊಳ್ಳಲು ಹೆಗಡೆ ಯತ್ನ — ಬಂಗಾರಪ್ಪ ಆರೋಪ

ಕೊಪ್ಪ: ಸಾರಾಯಿ ಬಾಟ್ಲಿಂಗ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪಿನಿಂದ ಎದುರಾದ ನೈತಿಕ ಬಾಧ್ಯತೆಯಿಂದ ನುಣುಚಿಕೊಳ್ಳಲು ರಾಮಕೃಷ್ಣ ಹೆಗಡೆ ತಮ್ಮ ಬೆನ್ನು ನೋವಿನ ಅವಕಾಶವನ್ನು 'ರಾಜಕೀಯ'ವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ರಾಜ್ಯ ವಿಧಾನ ಸಭೆ ವಿರೋಧ ಪಕ್ಷದ ನಾಯಕ ಎಸ್. ಬಂಗಾರಪ್ಪ ಟೀಕಿಸಿದರು.

ರಾಜ್ಯದ ಸಮಗ್ರ ಪ್ರವಾಸ ಕೈಗೊಂಡಿರುವ ಅವರು ಏ. 27ರಂದು ನ.ರಾ.ಪುರ, ಕೊಪ್ಪ, ಶೃಂಗೇರಿಗಳಲ್ಲಿ ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದರು.

ರಾಜ್ಯದ ಬಹು ದೊಡ್ಡ ಭಾಗದಲ್ಲಿ ಬರ ಬಡಿದಿದೆಯಾದರೂ ಮುಖ್ಯ ಮಂತ್ರಿಯಾಗಲಿ, ಬೇರೆ ಮಂತ್ರಿಗಳೇ ಆಗಲಿ ಅಲ್ಲಿ ಪ್ರವಾಸ ಮಾಡಿ ಜನರ ಕಷ್ಟ-ಕಾರ್ಪಣ್ಯ ವಿಚಾರಿಸಿಲ್ಲ. ಕೇಂದ್ರ ಸರ್ಕಾರ ಬರ ಪರಿಹಾರಕ್ಕೆ ಹಣ ಕೊಡುತ್ತಿಲ್ಲವೆಂದು ಸುಳ್ಳು ಹೇಳುತ್ತಿರುವ ಇವರುಗಳು, ಅದು ಕೊಟ್ಟ ಅಭೂತಪೂರ್ವ 103 ಕೋಟಿ ರೂ.ಗಳಲ್ಲಿ ಬಹು ದೊಡ್ಡ ಅಂಶವನ್ನು ಹೋಟೆಲ್ ಯೋಜನೆ, ಸುಳ್ಳು ಲೆಕ್ಕಗಳಿಂದ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆಪಾದಿಸಿದರು.

ಈ ಸರ್ಕಾರ 1984-85ರಲ್ಲಿ 8 ಲಕ್ಷ ಲೀಟರ್ 'ರೆಕ್ಟಿಫೈಡ್ ಸ್ಪಿರಿಟ್'ನ ಅಕ್ರಮ ಮಾರಾಟದಿಂದ ಕೋಟಿಗಟ್ಟಲೆ ಹಣ ಮಾಡಿದೆ. ಸಾರಾಯಿ ಬಾಟ್ಲಿಂಗ್ ಗುತ್ತಿಗೆಯನ್ನು ತಮಗೆ ಬೇಕಾದ 8 ಜನರಿಗೆ ನೀಡಿ ಅವ್ಯವಹಾರ ಮಾಡಿದೆ ಎಂಬುದನ್ನು ಅಂಕಿಅಂಶ ಮತ್ತು ದೃಷ್ಟಾಂತ ಸಹಿತವಾಗಿ ವಿವರಿಸಿದರು.

ಕೊಪ್ಪದಲ್ಲಿ ಪೋಲೀಸ್ ದೌರ್ಜನ್ಯ ಹೆಚ್ಚಿದೆಯೆಂದ ಬಂಗಾರಪ್ಪ, ಆ [illegible]ನಲ್ಲಿರುವ ಸಬ್ ಇನ್ಸ್‌ಪೆಕ್ಟರನ್ನು ರಾಜಕೀಯ ಒತ್ತಡದಿಂದ ಪುನಃ ಇಲ್ಲೇ ನೇಮಿಸಿದರೆ ಸ್ಥಳೀಯ ಮುಖಂಡರ ಜೊತೆ ತಾವು ಸಹ ಇಲ್ಲಿ ಚಳುವಳಿ ಹೂಡುವುದಾಗಿ "ಎಚ್ಚರಿಸಿದರು".

ಈಚೆಗೆ ಜೀಪ್ ಅಪಘಾತದಲ್ಲಿ ಮಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎ.ಎಂ. [illegible]ಗೌಡರಿಗೆ ಸಂತಾಪ ಸೂಚಿಸಿ, [illegible] ಕುಟುಂಬದವರಿಗೆ ಏನಾದರೂ [illegible] ಮಾಡಬೇಕಾಗುವುದೆಂದರು.

ವೇದಿಕೆ

'ದುಷ್ಟ ಶಕ್ತಿ'ಗಳೇ ?

ತಾ|| 20.4.86ರ ಸಂಚಿಕೆಯಲ್ಲಿ 'ಸಂ ...ದಾಯ ವಿರೋಧಿ ದುಷ್ಟ ಶಕ್ತಿಗಳಿಗೆ ಆ ...ಂತ್ರಣವಿಲ್ಲ' ಎಂಬ ತಲೆ ಬರಹದಲ್ಲಿ ...ಸ್. ಗುಂಡಣ್ಣ ಹೆಗ್ಡೆಯವರ ಪ್ರತಿಕ್ರಿಯೆ ...ದಿ ಅತ್ಯಾಶ್ಚರ್ಯವಾಯಿತು.

ಏಕೆಂದರೆ ಸಹಪಂಕ್ತಿ ಭೋಜನಕ್ಕೆ ಅಥ ...ಾ ಇನ್ಯಾವುದೇ ರೀತಿಯಲ್ಲಿ ಸಾಮಾಜಿಕ ...ಾಮರಸ್ಯಕ್ಕೆ ಪ್ರೋತ್ಸಾಹ ನೀಡುವವರು ...ವರ ದೃಷ್ಟಿಗೆ 'ದುಷ್ಟ ಶಕ್ತಿ'ಗಳಾಗಿ ಕಾ ...ಣುತ್ತಾರಲ್ಲ! ಹಾಗಾದರೆ ಈ ಕಾಲದಲ್ಲೂ ...ೕಲು-ಕೀಳು, ಅಸ್ಪೃಶ್ಯ-ಹರಿಜನ ಮುಂ ...ಾದ ಭೇದ ಭಾವನೆಯನ್ನು ಮನಸ್ಸಿನಲ್ಲೂ ...ುಂಬಿಕೊಂಡು ಸಮಾಜದಲ್ಲೂ ಪೋಷಿಸಿ, ...ಪ್ರೋತ್ಸಾಹಿಸಿಕೊಂಡು ಬರುವವರು ಇವರಿಗೆ ...ಷ್ಟರಾಗಿ ಕಾಣುತ್ತಾರೋ ಹೇಗೆ?

ದೇವರು ಯಾರ ಗುತ್ತಿಗೆಯಲ್ಲ. ಈ ದೇವ ...ಸ್ಥಾನವಂತೂ ಸರ್ಕಾರದ, ಅಂದರೆ ಸಾರ್ವ ...ಜನಿಕರ ವಸ್ತು. ಸಾಮಾನ್ಯ ಜನರಲ್ಲಿ ದೇವ ...ರು-ದೇವಸ್ಥಾನಗಳ ಬಗ್ಗೆ ಮುಗ್ಧ ಭಕ್ತಿ ...ತುಂಬಿದೆ. ಯಾರ ಆಮಂತ್ರಣವಿಲ್ಲದಿದ್ದರೂ ...ಅವರು ದೇವಸ್ಥಾನಕ್ಕೆ ಬರುತ್ತಾರೆ. ಹಾಗೆ ...ಬಂದ ನಿಷ್ಕಲ್ಮಷ ಭಕ್ತಿಯ ಜನರಲ್ಲಿ ಭೇ ...ದ ಮಾಡುವುದು ಸರಿಯೋ-ತಪ್ಪೋ ಎಂಬು ...ದಷ್ಟೇ ಇಲ್ಲಿನ ಪ್ರಶ್ನೆ.

—ಸುಧೀರ್ ಅನಂದೂರು.

ಸಮಾನತೆ ಒತ್ತಾಯದಿಂದ ಬರುವಂಥದಲ್ಲ

ಕಿಗ್ಗ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನಕ್ಕೆ ವ್ಯವಸ್ಥೆಯಾಗಬೇಕು ಎಂಬ ವಿಚಾರವನ್ನು ಕುರಿತ ಪ್ರತಿಕ್ರಿಯೆಗಳನ್ನು ಗಮನಿಸುತ್ತಾ ಬಂದಿದ್ದೇನೆ. ಆದರೆ ಈ ವಿಚಾರದಲ್ಲಿ ನಾನು ಯಾವುದೇ ವಿಚಾರವನ್ನು ಪ್ರಸ್ತಾಪಿಸುವುದಿಲ್ಲ.

ನನ್ನ ದೃಷ್ಟಿಯಲ್ಲಿ ಒಂದೆಡೆ ಕಲೆತು, ಕುಳಿತು, ಉಂಡು-ತಿಂದ ಮಾತ್ರಕ್ಕೆ, ನಮ್ಮ ಮನಸ್ಸು ಒಂದಾಗುತ್ತದೆ ಎಂಬುದು ಕೇವಲ ಭ್ರಮೆ. ಇದು ಸಾಧ್ಯವಾಗುವಂತಿದ್ದರೆ, ನಮ್ಮಲ್ಲಿ ಎಲ್ಲಾ ಜಾತಿಗಳು ಅಳಿದು, ಕೇವಲ 'ಮಾನವ ಸಮಾಜ' ಮಾತ್ರ ನಿರ್ಮಾಣವಾಗಿ, ನಮ್ಮದು ಆದರ್ಶ ರಾಮರಾಜ್ಯ ಎನಿಸಿಕೊಳ್ಳುತ್ತಿತ್ತು. ಆದರೆ ಇಂದಿನ ಪರಿಸ್ಥಿತಿ ಹಾಗಿದೆಯೆ? "ಸತ್ತರೂ ಸಾಯದಂತಿರುವ ಜಾತಿ ಸರ್ಪ ನಾನಾ ರೀತಿಯಲ್ಲಿ ತನ್ನ ಹೆಡೆಯನ್ನು ಆಡಿಸುತ್ತಲೇ ಇದೆ." ಇಂತಹ ಹಿನ್ನೆಲೆಯಲ್ಲಿ ಕೇವಲ ಕೆಲವು ಗಂಟೆ ಮಾತ್ರ ಒಟ್ಟಿಗೆ ಕುಳಿತು ಊಟ ಮಾಡಿದರೆ, ನಮ್ಮಲ್ಲಿ 'ನಾವೆಲ್ಲ ಒಂದು' ಎಂಬ ಭಾವನೆ ಬೆಳೆಯುತ್ತದೆ, ಬಲಿಯುತ್ತದೆ ಎಂದು ಭಾವಿಸುವಂತಿಲ್ಲ.

10ನೇ ಶತಮಾನದಲ್ಲಿಯೇ ಕವಿ ಪಂಪ ಸಾರಿ ಹೇಳಿದ "ಮನುಷ್ಯ ಜಾತಿತಾಂ ಒಂದೇ ವಲಂ" ಎಂದು. ಆದರೆ ಆತ ಘೋಷಿಸಿ ಶತಮಾನಗಳೇ ಉರುಳಿದರೂ, ಏಕೆ ಸುಧಾರಣೆಯಾಗಲಿಲ್ಲ? ಪ್ರತಿಯೊಬ್ಬ ಮಾನವ ಹೃದಯದಲ್ಲೂ ಈ ಸಮಾನತೆಯ ಭಾವ, ಅಂತಃಕರಣಪೂರ್ವಕವಾಗಿ ಬೆಳೆದು ಬರಬೇಕೆ ವಿನಹ, ಅದನ್ನು ಹೆದರಿಕೆ-ಬೆದರಿಕೆ ಹಾಕುವುದರಿಂದ ಖಂಡಿತಾ ಸುಧಾರಿಸಲು ಸಾಧ್ಯವಿಲ್ಲ; ಹಾಗೆ ಒತ್ತಾಯ ಪಡಿಸಿದರೆ, ಅದು ಕೇವಲ 'ಗುದ್ದಿ ಹಣ್ಣು ಮಾಡಿದರೆ' ಏನು ಫಲ ಸಿಕ್ಕುವುದೋ, ಅಷ್ಟೇ ಫಲ ಸಿಕ್ಕುವುದು.

ಇನ್ನು ಕೆಲವು ಸ್ಥಳ, ಸನ್ನಿವೇಶಗಳಿಗೆ ಅನುಸಾರವಾಗಿ ಕೆಲವು ನಿಯಮ-ನಿರ್ಬಂಧಗಳನ್ನು ವಿಧಿಸಿರುತ್ತಾರೆ. ಅದನ್ನು ನಾನು ಪೂರ್ಣವಾಗಿ ಸರಿ ಎಂದು ಸಮರ್ಥಿಸಲು ಹೋಗುತ್ತಿಲ್ಲ. ಆದರೆ, ಕೆಲವೊಮ್ಮೆ ಕೆಲವು ಕಟ್ಟು-ಪಾಡುಗಳನ್ನು ನಾವು ಪಾಲಿಸಬೇಕಾಗುತ್ತದೆ. ಬೇರೆ ಕಡೆಗಳಲ್ಲಿ ಸಹ, ಅಂದರೆ ಕೆಲವು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ, ಗಲಾಟೆ ಮಾಡಬಾರದು, ಮಾದಕ ಪೇಯಗಳನ್ನು ಸೇವಿಸಿ ಬಂದು ಗೊಂದಲ ಮಾಡಬಾರದು, ಹುಡುಗಿಯರನ್ನು ಚುಡಾಯಿಸಬಾರದು, ಸಾರ್ವಜನಿಕರ ನೆಮ್ಮದಿಗೆ ಭಂಗ ತರಬಾರದು, ಯಾರಾದರೂ, ಏನಾದರೂ ಕಾರ್ಯಕ್ರಮವನ್ನು ನಡೆಸುತ್ತಿರುವಾಗ ನಗುವುದು, ಹಾಸ್ಯಮಾಡುವುದು, ಜೊಬ್ಬೆ ಹಾಕುವುದು-ಮೊದಲಾದುವೆಲ್ಲ ಮಾಡಬಾರದು-ಮುಂತಾಗಿ ಕಟ್ಟುಪಾಡುಗಳಿರುತ್ತವೆ. ಆದರೆ ಎಷ್ಟು ಜನ ಇದನ್ನು ಪಾಲಿಸುತ್ತಾರೆ? ಇಂಥವನ್ನು ಮಾಡಬಾರದೆಂದು ಹೇಳಹೋಗುವವರೇ ಇಂತಹವರ ಅಪಹಾಸ್ಯಕ್ಕೆ ಗುರಿಯಾಗುವಂತಾಗಿದೆ. ನಾವು ಸಂಚರಿಸುವ ಬಸ್ಸುಗಳಲ್ಲಿ, ಕೆಲವೊಂದು ಪ್ರಶಾಂತವಾದ ವಾತಾವರಣವಿರುವಂತಹ ಕಡೆಗಳಲ್ಲಿ 'ಧೂಮಪಾನ ಮಾಡಬಾರದು' ಎಂದಿರುತ್ತದೆ. ಆದರೆ, ಅದು ಯಾರಿಗೇ ವಿರೋಧವೆನಿಸಿರಲಿ, ನಾವು ಅದನ್ನು ಬಿಡಲು ಸಿದ್ಧರಿದ್ದೇವೆಯೆ? ಅಂತಹ ಗುಂಪಿಗೆ ಸೇರದವನೇ ಅವರ ದೃಷ್ಟಿಯಲ್ಲಿ ಅನಾಗರಿಕ, ಮೂರ್ಖನೆನಿಸಿ ಕೊಳ್ಳುತ್ತಾನೆ. ಇಂತಹ ಕ್ಷುಲ್ಲಕ, ಸಣ್ಣ ವಿಚಾರಗಳಲ್ಲಿಯೂ, ನಾವು ನಮ್ಮ ನಮ್ಮ ಆಚಾರ-ವಿಚಾರಗಳಲ್ಲಿಯೇ ಭೇದ-ಭಿನ್ನತೆಯನ್ನು ಹೊಂದಿರ ಬೇಕಾದರೆ, ಸಾವಿರಾರು ಜನರು ಸೇರುವ ಒಂದು ಕಡೆಯಲ್ಲಿ ಎಲ್ಲರೂ, ಒಂದೇ ರೀತಿಯಲ್ಲಿ ವ್ಯವಹರಿಸ ಬೇಕೆಂದರೆ-ಹೇಗೆ ಸಾಧ್ಯವಾದೀತು?

'ಅಲ್ಲದೆ ಕೇವಲ ಸಹಪಂಕ್ತಿ ಭೋಜನದಿಂದ ಮಾತ್ರ, ನಮ್ಮ ಸಮಾಜದ ಸುಧಾರಣೆಯಾಗುವಂತಿದ್ದರೆ ಮೀಸಲಾತಿಯ ಪ್ರಶ್ನೆಯಾಗಲಿ, ಇಂತಹ ಜಾತಿಗೆ ಇಷ್ಟಿಷ್ಟು ಪ್ರಾತಿನಿಧ್ಯ ಎಂದಾಗಲಿ, ಅಥವಾ ಯಾವುದೇ ಸ್ಥಾನ-ಮಾನಗಳಿಗೂ ಕೋಮುವಾರು ಪ್ರಸ್ತಿಯಾಗಲಿ, ಬೇಕಾಗಿರಲಿಲ್ಲ. ಇಲ್ಲೆಲ್ಲಾ 'ಜಾತಿವಾರು' ದೃಷ್ಟಿಯನ್ನಿರಿಸಿಕೊಂಡು, ನಮ್ಮ ನಮ್ಮ ಹಿತವನ್ನು ನಾವು ನೋಡಿಕೊಳ್ಳುತ್ತಿರಬೇಕಾದರೆ, ಕೇವಲ ಸ್ವಲ್ಪ ಹೊತ್ತು ಕೂಡಿ ಕಲೆಯುವ ಸ್ಥಳಗಳಲ್ಲಿ "ನಾವೆಲ್ಲ ಒಂದು" ಎಂಬುದು ಕೇವಲ ಮುಖವಾಡವಾಗುತ್ತದೆ.

ಆದುದರಿಂದ ಅವರವರ ಆಚಾರ ವಿಚಾರ ಅವರವರಿಗೆ. ನಮಗೆ ಹಿತವೆನಿಸಿದರೆ ಅಂತಹ ಕಡೆಯಲ್ಲಿ ಭಾಗವಹಿಸೋಣ. ಇಲ್ಲವಾದರೆ ದೂರವೇ ಉಳಿಯೋಣ. ಇನ್ನೊಬ್ಬರ ಮನಸ್ಸು ಭಾವನೆಗಳನ್ನು ನೋಯಿಸುವಂತಹ, ಕೆದಕುವಂತಹ ರೀತಿಯಲ್ಲಿ ನಡೆಯುವುದಾಗಲಿ, ನುಡಿಯುವುದಾಗಲಿ ಸರಿಯಲ್ಲ. ಈ ರೀತಿಯ ಒತ್ತಾಯದಿಂದ ಎಲ್ಲರನ್ನು ಒಂದು ಮಾಡಲೂ ಸಾಧ್ಯವಾಗುವುದಿಲ್ಲ.

ಅಂದ ಮಾತ್ರಕ್ಕೆ ಕಿಗ್ಗದ ದೇವಸ್ಥಾನದಲ್ಲಿ ನಡೆಯುತ್ತಿರುವ ಭಿನ್ನ ಪಂಕ್ತಿಯ ಭೋಜನ ವ್ಯವಸ್ಥೆಗೆ ನನ್ನ ಸಮ್ಮತಿಯಿದೆ ಎಂದು ಯಾರೂ ಭಾವಿಸಬಾರದು. ಆ ವ್ಯವಸ್ಥೆ ಮುಂದುವರಿಯ ಬೇಕೆ? ಬೇಡವೆ? ಎಂಬುದನ್ನು ಕಾಲವೇ ನಿರ್ಧರಿಸುತ್ತದೆ. ಆದರೆ ಇಲ್ಲಿ ನಾನು ವಿಚಾರ ಮಾಡ ಹೊರಟಿರುವುದು "ಮಾನವ ಸಮಾಜವೆಲ್ಲವೂ ಒಂದೇ" ಎಂಬ ಭಾವನೆ ಎಷ್ಟು ಜನರಲ್ಲಿ ಸಹಜವಾಗಿ ಮೂಡಿ ಬಂದಿದೆ? ಅದು ಎಲ್ಲಿ ಕಾರ್ಯಗತವಾಗಿದೆ? ಎಂಬುದೊಂದೇ ನನ್ನ ಸಮಸ್ಯೆ. ಅಂಥ ವಿಶಾಲ ಭಾವನೆ ಮೂಡುದಿದ್ದರೆ, ನಾನು ಮೊದಲೇ ಹೇಳಿದ ಹಾಗೆ, ವಚನಕಾರರ ಕಲ್ಪನೆಯ ಸಮಾಜ ಮೂಡಿ ಬರಬೇಕಾಗಿತ್ತು. ಅಂತೇ ರಾಘವಾಂಕ ಘೋಷಿಸಿದ ಹಾಗೆ "ಅತಿ ಹುಸಿವಯತಿ ಹೊಲೆಯ; ಹುಸಿಯದಿಹ ಹೊಲೆಯನೇ ಉನ್ನತ ಯತಿವರನು" ಎಂಬ ರೀತಿಯಲ್ಲಿ ಸಮಾಜ ನಿರ್ಮಾಣವಾಗಬೇಕಾಗಿತ್ತು. ಆದರೆ ಅಂತಹ ಸಮಾಜದ ನಿರ್ಮಿತಿ ಸಾಧ್ಯವಾಗಿಲ್ಲ. ಮೊದಲು ಮನಸ್ಸಿನಲ್ಲಿ "ನಾವೆಲ್ಲ ಒಂದು" ಎಂಬ ಭಾವನೆ ಮೂಡಿ ಬರಲಿ. ಆ ಭಾವನೆ ಬಲಿತ ಕೂಡಲೇ, ಎಲ್ಲಾ ಆಚಾರ-ವಿಚಾರಗಳಲ್ಲಿಯೂ ಸಮಾನ ದೃಷ್ಟಿ, ಭಾವನೆ ಮೂಡಿ ಬರುವ ಅವಕಾಶವಾಗುತ್ತದೆ. ಇಲ್ಲವಾದರೆ ಇದು ಕೆಲವೇ ಕೆಲವರ ಭಾಷಣ-ಬರಹಗಳಲ್ಲಿಯೇ ಉಳಿಯುತ್ತದೆ.

—ಹೆಚ್. ಎಲ್. ಸುಬ್ರಹ್ಮಣ್ಯ,
ಶೃಂಗೇರಿ.

ಸ್ವಾಭಿಮಾನ ?

ಕಿಗ್ಗ ದೇವಸ್ಥಾನದ ಸಹಪಂಕ್ತಿ ಭೋಜನದ ಬಗ್ಗೆ: ಇಲ್ಲಿನ ದೇವರ ಕಾರ್ಯದ ಬಗ್ಗೆ ಲೇಖನವನ್ನು ಓದುವಾಗ ಹೆಚ್ಚಾಗಿ ಎದ್ದು ಕಾಣುವುದು ಜಾತೀಯತೆ. ಭೋಜನ ಮಾಡುವಾಗ ಬ್ರಾಹ್ಮಣರು, ಒಕ್ಕಲಿಗರು, ಹರಿಜನರು ಎಂದು ಬೇರೆ ಬೇರೆ ಪಂಕ್ತಿ ಮಾಡಿರುವುದು ಬ್ರಾಹ್ಮಣರಲ್ಲ. ಇಲ್ಲಿ ಬ್ರಾಹ್ಮಣರನ್ನು ದೂಷಿಸುವುದು ನಿಜವಾಗಿಯೂ ತಪ್ಪು. ಜಾತೀಯತೆಯನ್ನು ರೂಪಿಸಿದ್ದು ನಮ್ಮ ಹಿಂದಿನ ಸಾಮಾನ್ಯ ಜನರೇ ಹೊರತು ಬ್ರಾಹ್ಮಣರಲ್ಲ.

ಹಿಂದೆ ಜನರ ಕೆಲಸದ ಮೇಲೆ ಜಾತೀಯತೆ ಹುಟ್ಟಿಕೊಂಡಿತು. ಹಾಗೆಯೇ ಬ್ರಾಹ್ಮಣರು ದೇವರನ್ನು ಪೂಜಿಸುವವರೆಂದು ನಿರ್ಧರಿಸಲಾಯಿತು. ಹಾಗೆಯೇ ವೇದ-ಮಂತ್ರಗಳನ್ನು ಕಲಿತ ಈ ಬ್ರಾಹ್ಮಣರ ಪಂಗಡ ದೇವರನ್ನು ಪೂಜಿಸಲು ಏಕಾಗ್ರ ಚಿತ್ತದಿಂದ ಇರಬೇಕಾದರೆ ಮಡಿಯು ಮುಖ್ಯವಾಗಿರಬೇಕು. ದೇಹ, ಮಾತು, ಮನಸ್ಸು ಶುದ್ಧವಾಗಿರಬೇಕು. ಹಾಗೆಯೇ ದೇವಾಲಯದಲ್ಲಿ ಪ್ರತ್ಯೇಕವಾಗಿ ಪರಿಶುದ್ಧತೆಯಿಂದ ಇರಲು ಉಳಿದ ಪಂಗಡದ ಜನರಿಂದ ಪ್ರತ್ಯೇಕವಾಗಿ ಇರಬೇಕಾಗಿ ಬಂತು. ಇದರಿಂದ ಸಮಾನತೆಗೆ ಯಾವ ಅಡ್ಡಿಯೂ ಇಲ್ಲ.

ಆದರೆ ಇಲ್ಲಿ (ನಾವು) ಉಳಿದ ಜಾತಿಯವರು ಇಂಥ ಪರಿಶುದ್ಧ ದೇವತಾ ಆರಾಧನೆಯನ್ನು ಅಶುದ್ಧಕ್ಕೆ ಎಡೆ ಕೊಡದೆ ಪ್ರೋತ್ಸಾಹಿಸಬೇಕು. ಹೀಗಾದರೆ ಮಾತ್ರ ಹಿಂದೂ ಧರ್ಮ ಉಳಿಯುವುದು. ಇಲ್ಲದಿದ್ದರೆ ಸಮಾನತೆ ಎಂಬ ಅಡ್ಡ ಹೆಸರಿನಲ್ಲಿ ಎಲ್ಲಾ ಪಂಗಡದ ಜನರು ದೇವಸ್ಥಾನದ ಒಳಗಿನ ಎಲ್ಲಾ ಕಾರ್ಯದಲ್ಲಿ ಭಾಗಿಗಳಾಗಲು ಹೋದರೆ, ನಮ್ಮ, ನಮ್ಮಲ್ಲಿ ಮನಃಕ್ಲೇಶ ಉಂಟಾಗಿ ಗೊಂದಲಕ್ಕೆಡೆಯಾಗುತ್ತದೆ. ಆಗ ಹಿಂದೂ ಧರ್ಮವೇ ನಶಿಸಿ ಹೋಗುವುದರಲ್ಲಿ ಸಂಶಯವೇ ಇಲ್ಲ. ಧರ್ಮವಿಲ್ಲದ ಜನಾಂಗ ಹೇಗೆ ಸಾಧ್ಯ?

ಅನೇಕರು ಹೇಳುತ್ತಾರೆ: ಊಟ ಮಾಡುವಾಗ ಎಲ್ಲರೂ ಒಟ್ಟಾಗಿ ಕುಳಿತು ಮಾಡಬೇಕು ಎಂದು. ಹೀಗಾದರೆ ಅನೇಕ ವೇದ, ಮಂತ್ರ ಕಲಿತ ಬ್ರಾಹ್ಮಣರು ನಾವು ಹಿಂದಿನಿಂದ ನಡೆಸಿಕೊಂಡು ಬಂದ ದೇವತಾ ಕಾರ್ಯ ಬಿಡುತ್ತೇವೆ ಎಂದು ಹೇಳಿದರೆ ಉಳಿದ ಪಂಗಡದ ಜನರು ತಮ್ಮ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ದೇವತಾ ಕಾರ್ಯದಲ್ಲಿ ತೊಡಗುವರೇ?

ಎಷ್ಟೋ ಕಡೆಗಳಲ್ಲಿ ದೇವಾಲಯಗಳಲ್ಲಿ ಯಾವುದೇ ದೇವತಾ ಕಾರ್ಯವಿಲ್ಲದೆ ಹಾಳು ದೇಗುಲವಾಗಿ ಮೂಲೆ ಪಾಲಾಗಿ ಬಿದ್ದಿವೆ. ಇದು ಏಕಾಗಿ ಹೀಗಾಗಿದೆ? ಇಂತಹ ದೇವಸ್ಥಾನಗಳಲ್ಲಿ ಬ್ರಾಹ್ಮಣರಲ್ಲದೆ ಉಳಿದ ಪಂಗಡದ ಜನರಾದರೂ ದೇವತಾ ಕಾರ್ಯದಲ್ಲಿ ತೊಡಗಬಹುದಲ್ಲವೆ?

ಈಗ ದೇವಸ್ಥಾನದಲ್ಲಿ ನಡೆಯುತ್ತಿರುವ ಯಾವುದೇ ದೇವತಾ ಕಾರ್ಯದಲ್ಲಿ ನಮ್ಮ ಅಡ್ಡಿಯೇ ಇರಬಾರದು, ಅದನ್ನು ಟೀಕಿಸಲೂ ಬಾರದು. ನಮಗೆ ಈ ದೇವತಾ ಕಾರ್ಯ, ಊಟದ ವ್ಯವಸ್ಥೆ ಸರಿ ತೋರದಿದ್ದರೆ, ನಾವೇ ಅದರಿಂದ ದೂರವಿರಬೇಕು. ಅದನ್ನು ಬಿಟ್ಟು ನಮ್ಮ ಜಾತಿ ಪಂಗಡವನ್ನು ನಾವೇ ಕಡೆಗಣಿಸಬಾರದು. ಇದರಿಂದ ನಾವು ಕೀಳದರ್ಜೆಯವರಾಗುತ್ತೇವೆ.

ಅದರ ಬದಲು ನಾವು ಬ್ರಾಹ್ಮಣರೊಂದಿಗೆ ಊಟ ಮಾಡುವುದಿಲ್ಲ, ಹಾಗೆಯೇ ಬ್ರಾಹ್ಮಣರೂ ಕೂಡ ನಮ್ಮೊಂದಿಗೆ ಊಟ ಮಾಡಕೂಡದೆಂದು ನಾವು ನಮ್ಮ ಸ್ವಾಭಿಮಾನವನ್ನು ಬೆಳೆಸುವುದು ಮುಖ್ಯ.

—ಪ್ರಖ್ಯಾತ್ ಶೆಟ್ಟಿ,
ಹರಿಹರಪುರ

ಪದ್ಯದಂಗಣ

1) ಹುಬ್ಬಳ್ಳಿಯಲ್ಲಿ—

ಊರ ತುಂಬ ರಸ್ತೆ
ರಸ್ತೆ ತುಂಬ ಓಡಾಡಿ
ಹುಬ್ಬಳ್ಳಿ ಜನ ವಾಹನ
ಗಳಿಗೆ ಢಿಕ್ಕಿ ಹೊಡೆದರು.

2) ಕೊಪ್ಪ—

ಊರು ಹಾಳು ಜಾಗ
ದಲ್ಲಿ, ಮರ ಬೆಳೆಸಲು
ಕಾಡು ಉಳಿಸಲು ಹೊರಟ
ಪ್ರಕೃತಿ ಪ್ರೇಮಿಗಳು ಬೀಳಿ
ಗೆಂಡೇ ಗೂಟಗಳನ್ನು ಕಡಿದರು.

3) ಅಂತರ—

ನಮ್ಮ ನಿಮ್ಮಂತರ
ದಂತರಂಗದಲ್ಲಿ ಹೊಸ ಮಾತೇಕೆ?
ಮೌನ ಮಾತಿನಾಚೆಯಲ್ಲಿ
ಹೊಸ ಮಾತುಗಳುಂಟೆ ?

—ದೀಪಕ್

ಓದುಗರ ಪತ್ರಗಳು

"ಮಲೆನಾಡಿಗೆ ರೇಷ್ಮೆ ನಿರುಪಯುಕ್ತವಲ್ಲ"

—ಇಲಾಖೆ ಸ್ಪಷ್ಟನೆ

ಮಾನ್ಯರೇ,

ನಿಮ್ಮ ವಾರ ಪತ್ರಿಕೆಯಲ್ಲಿ ಬಂದಿರುವ "ಮಲೆನಾಡು ಪ್ರದೇಶದಲ್ಲಿ ರೇಷ್ಮೆ ನಿರುಪಯುಕ್ತ?" ಎಂಬ ವರದಿಯ ಬಗ್ಗೆ ಸ್ಪಷ್ಟೀಕರಣ ನೀಡಲು ಬಯಸುತ್ತೇನೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶಗಳಾದ ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ರೇಷ್ಮೆ ಕೈಗಾರಿಕೆ ಇತ್ತೀಚೆಗೆ ಪ್ರಾರಂಭವಾಗಿರುವುದರಿಂದ ಕೆಲವು ಕುಂದು–ಕೊರತೆಗಳಿರಬಹುದು. ಅದರಲ್ಲೂ ಭತ್ತ, ಕಾಫಿ ಮತ್ತು ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಕಾರ್ಮಿಕರ ಅಭಾವದಿಂದ ರೇಷ್ಮೆ ಬೆಳೆಗಾರರು ಈ ಕೈಗಾರಿಕೆಯ ಬಗ್ಗೆ ಆಸಕ್ತಿ ಕಳೆದುಕೊಂಡಿದ್ದಾರೆಯೇ ಹೊರತು ಈ ಕೈಗಾರಿಕೆ ನಿರುಪಯುಕ್ತವೆಂದಲ್ಲ. ಅತಿಯಾಗಿ ಮಳೆ ಬೀಳುವ ತಿಂಗಳುಗಳಲ್ಲಿ ಅಂದರೆ ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಹಿಪ್ಪುನೇರಳೆ ಸೊಪ್ಪಿನಲ್ಲಿ ನೀರಿನ ಅಂಶ ಜಾಸ್ತಿಯಾಗಿ ಬೆಳೆ ಕೆಡುವ ಸಾಧ್ಯತೆ ಇರುತ್ತದೆ. ಅಲ್ಲದೆ ಯಾವಾಗಲೂ ಮಳೆ ಸುರಿಯುವುದರಿಂದ ಬೆಳೆಗಾರರು ಸೊಪ್ಪನ್ನು ತೋಟದಿಂದ ನೆನೆಸದ ಹಾಗೆ ಕಿತ್ತು ತಂದು ರೇಷ್ಮೆ ಹುಳುಗಳಿಗೆ ಕೊಡಲು ಸಾಧ್ಯವಾಗುವುದಿಲ್ಲ. ಈ ಕಾರಣಗಳಿಂದ ಅತಿಯಾಗಿ ಮಳೆ ಬೀಳುವ ತಿಂಗಳುಗಳಲ್ಲಿ ರೇಷ್ಮೆ ಬೆಳೆಗಾರರು ಈ ಬೆಳೆಯನ್ನು ನಿಲ್ಲಿಸುತ್ತಾರೆ. ಇನ್ನುಳಿದ 9 ತಿಂಗಳುಗಳಲ್ಲಿ ನಾಲ್ಕರಿಂದ ಐದು ಬೆಳೆಗಳನ್ನು ನಡೆಸುತ್ತಾರೆ. ಅಲ್ಲದೆ ಅಧಿಕ ಇಳುವರಿಯನ್ನು ಪಡೆಯುತ್ತಿದ್ದಾರೆ. ಮತ್ತು ಮಲೆನಾಡಿನಲ್ಲಿ ಬೆಳೆದ ಬೈವೋಲ್ಟೀನ್ ಬಿತ್ತನೆ ರೇಷ್ಮೆಗೂಡುಗಳು ಇತರೆ ಪ್ರದೇಶಗಳಿಗಿಂತ ಉತ್ತಮ ಗುಣಮಟ್ಟದ್ದಾಗಿದ್ದು ರೇಷ್ಮೆ ಬೆಳೆಗಾರರಿಗೆ ಅಧಿಕ ಬೆಲೆಯೂ ಸಿಗುತ್ತಿದೆ ಎಂಬ ಅಂಶವನ್ನು ಸಾರ್ವಜನಿಕರ ಗಮನಕ್ಕೆ ತರಬಯಸುತ್ತೇನೆ.

—ರೇಷ್ಮೆ ಸಹಾಯಕ ನಿರ್ದೇಶಕರು,
ಚಿಕ್ಕಮಗಳೂರು.

"ಹಲ್ಲೆ ಆರೋಪ ಸತ್ಯದೂರ"

ಮಾನ್ಯರೆ,

ನಿಮ್ಮ 20–4–86ರ ಸಂಚಿಕೆಯಲ್ಲಿ ಪ್ರಕಟವಾದ "ಹಲ್ಲೆ ಆರೋಪ: ಪ್ರಭಾವಿ ಸೋದರರ ಸೆರೆ" ಎಂಬ ವರದಿಯ ಬಗ್ಗೆ ಈ ಕೆಳಗಿನ ಸತ್ಯಾಂಶಗಳನ್ನು ತಿಳಿಸ ಬಯಸುತ್ತೇನೆ.

ದಿನಾಂಕ 18–4–86ರಂದು ನಮ್ಮ ತೋಟದ ಮೇಲುಗಡೆ ನಮ್ಮದೇ ಜಾಗದಲ್ಲಿ ಸಂಕನಕೊಡಿಗೆಯ ದಂಪತಿಗಳಿಬ್ಬರು ಕಟ್ಟಿಗೆ ಕಡಿದು ಸಾಗಿಸುತ್ತಿದ್ದಾಗ ನಾವುಗಳು ತಡೆದು ಕೇಳಿದ್ದಕ್ಕೆ ನಮಗೂ ಅವರಿಗೂ ಮಾತು ನಡೆದಿರುವುದು ನಿಜ. ಆದರೆ ಯಾವುದೇ ರೀತಿಯಾದ ಹಲ್ಲೆ ವಗೈರೆ ನಡೆದಿಲ್ಲ. ಸದರಿಯವರು ಪೋಲೀಸರಿಗೆ ಸುಳ್ಳು ದೂರು ನೀಡಿದ್ದು, ಅವರು ನಮ್ಮನ್ನು ಬಂಧಿಸಿದಾಗ ನಾವು ಯಾವುದೇ ರಾಜಕೀಯ ವ್ಯಕ್ತಿಗಳ ಹೆಸರು ಹೇಳಿಲ್ಲ ಮತ್ತು ಯಾವುದೇ ಪ್ರಭಾವ ಬೀರಿಲ್ಲ. ಇದು ಸತ್ಯ ಸಂಗತಿ.

ಮೇಲ್ಕಂಡ ಜಾಗದ ಬಗ್ಗೆ ನಮ್ಮ ಬಳಿ ಅಗತ್ಯವಾದ ದಾಖಲೆ–ಪತ್ರಗಳು ಇವೆ.

—ಬಿ. ಇ. ಮಹಮದ್ ಹನೀಫ್,
ಬಂಡಿಗಡಿ.

ನಂ. ವ್ಯಮಾಸ: ಶಿ: ರೈ 8317–566: 85–86 ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯಾಲಯ,
ಶಿವಮೊಗ್ಗ, ತಾ|| 9–4–1986

ಪ್ರ ಕ ಟ ಣೆ

ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪ್ತಿಯಾದ ಶಿವಮೊಗ್ಗ, ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ನಿಯಂತ್ರಣಕ್ಕೊಳಪಡಿಸಿದ ಹುಟ್ಟುವಳಿಗಳಾದ ಅಡಿಕೆ, ಭತ್ತ, ಅಕ್ಕಿ, ರಾಗಿ, ಜೋಳ, ಬೆಲ್ಲ, ಹುಣಸೇಹಣ್ಣು, ಸೀಗೆಕಾಯಿ, ಕಾಳುಮೆಣಸು, ಶೇಂಗಾ, ವೀಳ್ಯದೆಲೆ, ಮೆಣಸಿನಕಾಯಿ, ಮತ್ತು ದ್ವಿದಳ ಧಾನ್ಯಗಳ ಯಾವುದೇ ರೀತಿಯ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿರುವ ಸಮಸ್ತ ವರ್ತಕರು, ದಲ್ಲಾಲರು, ಆಮದುಗಾರರು, ರವಾನೆದಾರರು, ರೂಪಾಂತರಿಸುವವರು, ದಾಸ್ತಾನುಗಾರರು, ಹಮಾಲರು, ತೂಕದವರು, ಮಧ್ಯಸ್ತಿಕೆದಾರರು ಆದಿಯಾಗಿ ಎಲ್ಲಾ ರೀತಿಯ ಪೇಟೆ ಕಾರ್ಯಕರ್ತರಿಗೂ ತಿಳಿಯ ಪಡಿಸುವುದೇನೆಂದರೆ, 1985–86ನೇ ಸಾಲಿನ ಲೈಸೆನ್ಸ್ ಅವಧಿ ಜೂನ್ ಅಂತ್ಯಕ್ಕೆ ಮುಗಿಯಲಿದ್ದು, ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಶಾಸನ 1966 ಮತ್ತು ಕರ್ನಾಟಕ ರಾಜ್ಯ ವ್ಯವಸಾಯೋತ್ಪನ್ನ ಮಾರಾಟ (ನಿಯಂತ್ರಣ) ಕಾನೂನು 1968ರ ಅನ್ವಯ 1986–87ನೇ ಸಾಲಿನ ಲೈಸೆನ್ಸ್ ನವೀಕರಣಕ್ಕಾಗಿ ತಾ: 31–5–1986ರ ಒಳಗಾಗಿ ಅರ್ಜಿಯನ್ನು ನಿಗದಿತ ಫಾರಂನಲ್ಲಿ ನಿಗದಿತ ಶುಲ್ಕದೊಂದಿಗೆ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ಅರ್ಜಿಗಳನ್ನು ಪರಿಗಣಿಸಲು ಅರ್ಜಿಗಳೊಂದಿಗೆ ಅಗತ್ಯವಾಗಿ ಒದಗಿಸಬೇಕಾದ ದಾಖಲೆ, ಮಾಹಿತಿಗಳು ಈ ಕೆಳಕಂಡಂತಿವೆ:

1) ಪೂರ್ಣ ಭರ್ತಿ ಮಾಡಿ, ಸಹಿ ಮಾಡಿದ ಅರ್ಜಿ.
2) ಮಾರಾಟ ತೆರಿಗೆ ನೋಂದಣಿ/ಕ್ಲಿಯರೆನ್ಸ್ ಪ್ರಮಾಣ ಪತ್ರದ ಪ್ರತಿ
3) ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ, ಪಾಲುದಾರಿಕೆ ಪತ್ರದ ಪ್ರತಿ.
4) ಕಾನೂನು ರೀತ್ಯಾ ನಡೆದುಕೊಳ್ಳುವ ಬಗ್ಗೆ ಐದು ರೂ. ಮೌಲ್ಯದ ಛಾಪಾ ಕಾಗದದಲ್ಲಿ ನಿಗದಿಗೊಳಿಸಿದ ಕರಾರು ಪತ್ರ.
5) ನಿಗದಿಪಡಿಸಲ್ಪಟ್ಟ ಭದ್ರತಾ ಠೇವಣಿ.
6) ಮಾರ್ಕೇಟ್ ಸಮಿತಿಗೆ ಕಾಲ ಕಾಲಕ್ಕೆ ಸಲ್ಲಿಸಬೇಕಾದ ವರದಿಗಳನ್ನು ಸಲ್ಲಿಸಿದ ಬಗ್ಗೆ ದೃಢೀಕರಣ.
7) ಮಾರ್ಕೆಟ್ ಸಮಿತಿಗೆ ಈವರೆಗೆ ಪಾವತಿಸಬೇಕಾದ ಮಾರುಕಟ್ಟೆ ಶುಲ್ಕ ಇತ್ಯಾದಿಗಳನ್ನು ಪಾವತಿಸಿರುವ ಬಗ್ಗೆ ದೃಢಪಡಿಸುವ ಲೆಕ್ಕ ಪತ್ರಗಳು.
8) ಬಾಕಿ ಉಳಿಸಿಕೊಂಡ ಮಾರುಕಟ್ಟೆ ಶುಲ್ಕ, ಬಾಡಿಗೆ ಹಾಗೂ ಸಾಲದ ಅಸಲು ಬಡ್ಡಿ ಇತ್ಯಾದಿಗಳ ಸಂಪೂರ್ಣ ಪಾವತಿ.
9) ನಗದು ವ್ಯವಹಾರ ನಡೆಸುವವರು ತಮ್ಮ ನಗದು ವ್ಯಾಪಾರದ ಬಗ್ಗೆ ಛಾಪಾ ಕಾಗದದ ಮೇಲೆ ದೃಢೀಕರಣ.

ದಂಡ ಶುಲ್ಕದೊಂದಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ಅವಕಾಶ ದಿನಾಂಕ: 30–6–1986ರ ವರೆಗೆ ಮಾತ್ರ.

ನಿಗದಿಗೊಳಿಸಿದ ಅರ್ಜಿ ಫಾರಂಗಳನ್ನು ಮತ್ತು ಹೆಚ್ಚಿನ ವಿವರಗಳನ್ನು ಸಾರ್ವಜನಿಕ ರಜಾ ದಿನಗಳನ್ನು ಹೊರತು ಪಡಿಸಿ ಎಲ್ಲಾ ದಿವಸಗಳು ಕಛೇರಿ ವೇಳೆಯಲ್ಲಿ ಸಮಿತಿಯ ಆಡಳಿತ ಕಛೇರಿಯಲ್ಲಿ ಪಡೆಯಬಹುದು.

(ಸಹಿ) **ಕೆ. ಎನ್. ವೀರಪ್ಪಗೌಡ,**
ಅಧ್ಯಕ್ಷರು.

(ಸಹಿ) **ಹೆಚ್. ಎಂ. ರಾಮಕೃಷ್ಣ ರೆಡ್ಡಿ,**
ಕಾರ್ಯದರ್ಶಿ.

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ, ಶಿವಮೊಗ್ಗ

ವೇದಿಕೆ

ಸಹಪಂಕ್ತಿ ಭೋಜನ ಇಂದಿಗೆ ಆಗದ ಕೆಲಸ

ಇಂದಿನ ಸಮಾಜ ಸುಧಾರಕರ ಸಾಲಿನಲ್ಲಿ 'ಮುಂಜಾವು' ಪತ್ರಿಕೆ ಸಂಪಾದಕರು ಪ್ರಯತ್ನಿಸಿ ಸಹ ಪಂಕ್ತಿ ಭೋಜನದ ಬಗೆಗಿನ ವಿಚಾರಗಳನ್ನು ಪ್ರಕಟಿಸಿದ್ದಾರೆ.

ಆದರೆ ಜಾತಿಯಲ್ಲೇ ಒಳ ಪಂಗಡಗಳ ಸೃಷ್ಟಿಸಿಕೊಂಡು ಅಂತರವೆಣಿಸುವ ಜನರಿಂದ ತುಂಬಿರುವ ನಮ್ಮ ಸಮಾಜದಲ್ಲಿ ಸಹಪಂಕ್ತಿ **ಭೋಜನ** ಪದ್ಧತಿ ಬಳಕೆಗೆ ಬರಲು ಬಹಳ **ಕಾಲವೇ** ಬೇಕು. ಮನದ ಅಳುಕು ಅಳಿದಲ್ಲದೇ ಸಹಪಂಕ್ತಿ ಭೋಜನ ಸಮಾನತೆ ಕಲ್ಪಿಸದು. ಒಂದೇ ಜಾತಿಯವರು ನಾಮ/ ಮುದ್ರೆ/ವಿಭೂತಿ ಧರಿಸಿದವರು, ಲಿಂಗ ಧರಿಸಿದವರು—ಇತ್ಯಾದಿ ಅವರವರಲ್ಲೇ ಪಕ್ಷಪಾತವೆಣಿಸುವವರಿದ್ದಾರೆ. ಹೀಗಿರುವಾಗ ಬಹು ದಿನದ ಆಚರಣೆ ಅಳಿಯಲು ಸಾಧ್ಯತೆ ಇಂದಿಗೆ ಇಲ್ಲವಾಗಿದೆ. ಕಾರಣ ಬಸವಣ್ಣನವರು, ಅಂಬೇಡ್ಕರ್‌ರವರು ಇತ್ಯಾದಿ ಜನಗಳು ಜಾತಿ ನಿರ್ಮೂಲನ ಮಾಡ ಹೊರಟು ಅವರದೇ ಒಂದೊಂದು ಒಂದೊಂದು ಜಾತಿಗಳಾಗಿರುವುದನ್ನು ನಾವು ಮನಗಾಣಬಹುದಾಗಿದೆ. ಈ ನಿಟ್ಟಿನಲ್ಲಿ ತಾವು ಜಾತಿಯ ಕ್ರಾಂತಿಯನ್ನು ಮಾಡ ಹೊರಟಿರುವುದು ಕುಚೋದ್ಯಕ್ಕೆ ಎಡೆ ಮಾಡಿದೆ ಇದು ತಮ್ಮ ಪತ್ರಿಕೆಗೆ ಕೇವಲ ಸುದ್ದಿಯಾಗಬಹುದೇ ಹೊರತು ನಮ್ಮಲ್ಲಿರುವ ಜಾತಿಯನ್ನು ಅಳಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಬದಲಾಗಿ ಆಯಾ ಜಾತಿಯವರಲ್ಲಿ ಸ್ವಾಭಿಮಾನ ಹೆಚ್ಚಿಸಿದಂತಾಗಿ ಸಮಾಜದಲ್ಲಿ ಅಶಾಂತಿಗೆ ತಾವು ಕಾರಣರಾಗುತ್ತಿದ್ದೀರಿ ಎಂದು ಅನಿವಾರ್ಯವಾಗಿ ತಿಳಿಸಬೇಕಾಗಿದೆ.

ಸಮಾಜದ ಡೊಂಕನ್ನು ತಿದ್ದಲು ಹೊರಟು ಘರ್ಷಣೆಗೆ ಅನುವಾಗಬಾರದು. ಇಂದು ಚಂದ್ರಗುತ್ತಿಯ ಬೆತ್ತಲೆ ಸೇವೆಯ ಪ್ರಕರಣವೇ ಸಾಕ್ಷಿ ಆಗಿದೆ.

ಕ್ರಮೇಣ ಸುಧಾರಣೆ ಬರಲಿದೆ, ಅವಸರಸಲ್ಲದು. ಮನಃಪರಿವರ್ತನೆ ಮುಖ್ಯ. ಅಲ್ಲಿಯವರೆಗೆ ವಿಕೋಪಕ್ಕೆ ಹೋಗುವಂತೆ ಮಾಡುವುದು ಉಚಿತವಲ್ಲ ಎಂದಿಷ್ಟೇ ಹೇಳಬಹುದು. 'ಮುಂಜಾವು' ಪತ್ರಿಕೆ ಸಂಪಾದಕರು ಸಮಾಜದ ಸುಧಾರಣೆ ಬಯಸುವವರೆಂಬುದು ಖಚಿತ. ಆದರೆ ಅವರ ಮಾರ್ಗ ಅನುಸರಿಸಲು ಎಲ್ಲರೂ ಸಿದ್ಧರಾಗಲು ಕಾಲಾವಕಾಶ ಬೇಕಾಗಿದೆ ಎನ್ನಬಹುದು. ಈ ಆಧುನಿಕೆ ಯುಗದಲ್ಲಿ ಹಲವು **ಸುಧಾರಣೆಗಳು** ಆದ ನಂತರವೇ ಹೊಸ ಯುಗ ಪ್ರಾರಂಭವಾಗಬೇಕಲ್ಲವೇ? ಕಾಲ ಪರಿಪಕ್ವ ಆಗಿಲ್ಲ. ಅಲ್ಲಿಯವರೆಗೆ ಕಾಯಲೇ ಬೇಕು ಎಂಬುದು ನಮ್ಮ ಸಮಾಧಾನೋಕ್ತಿ.

—ಕೆ. ಎಂ. ಕೆ. ಮೂರ್ತಿ,
ಚಿಕ್ಕಮಗಳೂರು.

ಮಕ್ಕಳ ಕರಕುಶಲ ವಸ್ತುಗಳ ಪ್ರದರ್ಶನ

ನ.ರಾ.ಪುರದಲ್ಲಿ ಏ. 2ರಂದು ನಡೆದ ತಾ|| ಮಟ್ಟದ ಶಾಲಾಭಿವೃದ್ಧಿ ಸಮಿತಿಗಳ ಮತ್ತು ಶಿಕ್ಷಕರ ಸಮ್ಮೇಳನದ ಅಂಗವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಮಕ್ಕಳಿಂದ ಕರಕುಶಲ ವಸ್ತುಗಳ ಪ್ರದರ್ಶನವೊಂದು ಏರ್ಪಾಡಾಗಿತ್ತು. ಇಲ್ಲಿ ಬಣ್ಣದ ಕಾಗದ, ಬೆಂಡು ಮುಂತಾದುವುಗಳಿಂದ ಮಾಡಿದ ಚಿಕ್ಕ ಪುಟ್ಟ ವಸ್ತುಗಳಿಂದ ಹಿಡಿದು ರಟ್ಟಿನಿಂದ ಮಾಡಿದ ಯಂತ್ರಮಾನವ (ರೋಬಟ್)ನ ಮಾದರಿಯವರೆಗೆ; ಮೈಸೂರು ಕೃಷ್ಣರಾಜಸಾಗರದ ಬೃಂದಾವನದಲ್ಲಿರುವ 'ನರ್ತಿಸುವ ಕಾರಂಜಿ'ಗಳ ಪ್ರತಿಕೃತಿಯಿಂದ ಹಿಡಿದು "ಬರ್ಮುಡಾ ಟ್ರಯಾಂಗಲ್"ನ ಪ್ರತಿಕೃತಿಯವರೆಗೆ ವೈವಿಧ್ಯಮಯವಾದ ಕಲ್ಪನಾತ್ಮಕವಾದ ಹಲವು ರಚನೆಗಳಿದ್ದು ಮಕ್ಕಳ ಅಪಾರ ಕತೃತ್ವ ಮತ್ತು ಕಲ್ಪನಾ ಶಕ್ತಿಗೆ ಕನ್ನಡಿ ಹಿಡಿದಂತಿತ್ತು.

ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಅಭಿವೃದ್ಧಿಯಿಂದ ವಂಚಿತವಾಗುತ್ತಿರುವ ಹೈನುಗಾರಿಕೆ

(ಒಂದನೆಯ ಪುಟದಿಂದ)

ತಯಾರಿಸದೆ ಹಾಲು ವ್ಯರ್ಥವಾಗುತ್ತಿದ್ದು ದುದರಿಂದಲೇ ಡೈರಿ ನಿಗಮದವರು ಬಾಳೆಹೊನ್ನೂರಿನ ಸುತ್ತಲಿನ ಡೈರಿಗಳ ಬಗ್ಗೆ ಮತ್ತು ಮಲೆನಾಡಿನಲ್ಲಿ ಹೊಸದಾಗಿ ಡೈರಿಗಳನ್ನು ಬೆಳೆಸುವ ಬಗ್ಗೆ ಮುತುವರ್ಜಿ ವಹಿಸುತ್ತಿಲ್ಲ ಎನ್ನಲಾಗಿತ್ತು. ಈ ವಿಷಯ ಎಷ್ಟು ನಿಜವಾದುದೋ ಡೈರಿ ನಿಗಮದವರೇ ಹೇಳಬೇಕು. ಹಾಸನದಲ್ಲಿ ಒಂದು ಹಾಲಿನ ಪುಡಿಯನ್ನು ತಯಾರಿಸುವ ಕೈಗಾರಿಕೆ ಸ್ಥಾಪನೆ ಆಗುತ್ತದೆ ಎನ್ನುವ ವದಂತಿಯೂ ಇತ್ತು. ಅದರ ವಿಷಯವೂ ತಿಳಿದಿಲ್ಲ. ಹಾಸನದ ಡೈರಿಯನ್ನು ಹಾಗೂ ಬಾಳೆಹೊನ್ನೂರು ಶೀತಲೀಕರಣ ಘಟಕವನ್ನು ನಂಬಿ ಹಲವು ಬ್ಯಾಂಕುಗಳವರು ವಿವಿಧ ಯೋಜನೆಗಳನ್ವಯ ಡೈರಿಗಳಿಗೆ ಸಾಲ–ಸೌಲಭ್ಯಗಳನ್ನು ನೀಡಿದ್ದಾರೆ.

ಆದರೆ ಅದರ 'ಸೌಲಭ್ಯ' ಪಡೆದ ವ್ಯಕ್ತಿಗಳು ಈಗ ಹಾಲನ್ನು ಮಾರಲು ಪರದಾಡುವ ಸ್ಥಿತಿ ಕೆಲವು ಅಧಿಕಾರಿಗಳ ಕರ್ತವ್ಯಲೋಪದಿಂದ ಉಂಟಾಗಿದೆ. ಉಪಯುಕ್ತವಾದ ಹಲವು ಯೋಜನೆಗಳು ಹೀಗೆ ನಿರರ್ಥಕಗೊಳಿಸಲ್ಪಟ್ಟಿವೆ. ಈ ಬಗ್ಗೆ ಬಸರೀಕಟ್ಟೆಯ ಸಿಂಡಿಕೇಟ್ ಬ್ಯಾಂಕಿನ, ಉತ್ಸಾಹಶಾಲಿ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಶ್ರೀ ಜಗದೀಶ್‌ರವರು ಮುತುವರ್ಜಿ ವಹಿಸಿ ಅನೇಕ ಬಾರಿ ಪತ್ರಮುಖೇನ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಅವರಿಗೆ ಯಾವುದೇ ರೀತಿಯ ಉತ್ತರವನ್ನು ಹಾಸನದ ಡೈರಿ ನಿಗಮದ ಅಧಿಕಾರಿಗಳು ನೀಡದೆ ಜಗದೀಶ್ ಅವರಿಗೆ ಡೈರಿ ಅಭಿವೃದ್ಧಿಯ ಬಗ್ಗೆ ಇದ್ದ ಆಸಕ್ತಿಗೆ ತಣ್ಣೀರು ಎರಚಿದ್ದಾರೆ. ಈ ವಿಷಯವನ್ನು ಜಗದೀಶ್ ಅವರೇ ಅಕ್ಟೋಬರ್ 26ರ ಸಭೆಯಲ್ಲಿ ತಿಳಿಸಿ ಡೈರಿಯವರ ಉದಾಸೀನ ಪ್ರವೃತ್ತಿಯನ್ನು ಖಂಡಿಸಿದ್ದರು.

BAIF ಕೇಂದ್ರಗಳ ಮುಚ್ಚಿಸಿದರು

ಮತ್ತೊಂದು ಪ್ರಮುಖ ಅಂಶವೆಂದರೆ ಜಯಪುರ, ಮುತ್ತಿನಕೊಪ್ಪ ಮುಂತಾದ ಕಡೆ BAIF ಸಂಸ್ಥೆಯವರು ನಡೆಸುತ್ತಿದ್ದ ಕೃತಕ ಗರ್ಭಧಾರಣಾ ಕೇಂದ್ರಗಳ ಸಿಬ್ಬಂದಿಗಳು, ವೈದ್ಯರುಗಳು ರೈತರಿಗೆ ಅತ್ಯುತ್ತಮವಾದ ಸೇವೆ ಸಲ್ಲಿಸುತ್ತ ಇದ್ದು, ಹಲವು ಉತ್ತಮ ತಳಿಯ ದನಕರುಗಳ ಅಭಿವೃದ್ಧಿಗೆ ಕಾರಣರಾಗಿದ್ದರು. ಅವರು ಗರ್ಭಧಾರಣೆ ಮಾಡಿಸಿ ಹುಟ್ಟಿದ ಜಾನುವಾರು ಒಂದಕ್ಕೆ ಸರ್ಕಾರ 150ರೂ. ಹಣ ಪಾವತಿ ಮಾಡುವ ಒಪ್ಪಂದವಿತ್ತೆಂದು ಹೇಳಲಾಗಿದೆ. ತಳಿ ಅಭಿವೃದ್ಧಿಯ ಬಗ್ಗೆ ಅವರಿಗಿದ್ದ ಮಾಹಿತಿ, ಸೌಲಭ್ಯ, ಮುತುವರ್ಜಿಗಳು ಹಾಸನದ ಡೈರಿ ನಿಗಮದವರಿಗಾಗಲಿ, ಪಶುವೈದ್ಯ ಇಲಾಖೆಗಾಗಲಿ ಖಂಡಿತ ಇಲ್ಲ. ಆದರೆ ಹಾಸನದ ಡೈರಿ ನಿಗಮದವರು ಶೀರ ಕಡಿಮೆ ಖರ್ಚಿನಲ್ಲಿ ತಾವು ಆ ಕೆಲಸ ಮಾಡುತ್ತೇವೆಂದು ಹೇಳಿ, ಜಯಪುರ, ಮುತ್ತಿನಕೊಪ್ಪ ಮುಂತಾದ BAIF ಕೇಂದ್ರಗಳನ್ನು ಮುಚ್ಚಿಸುವಲ್ಲಿ ಯಶಸ್ವಿಯಾಗಿದ್ದಾರಲ್ಲದೆ ಈ 2 ವರ್ಷಗಳಲ್ಲಿ ಒಮ್ಮೆಯಾದರೂ ಡೈರಿ ನಿಗಮದ ವೈದ್ಯರುಗಳು ರೈತರಿಗೆ ಯಾವುದೇ ಸೌಲಭ್ಯ ಒದಗಿಸದೆ ರೈತರನ್ನು "ಬಾಣಲೆಯಿಂದ ಬೆಂಕಿಗೆ" ಹಾಕಿರುತ್ತಾರೆ. ಈ BAIF ಕೇಂದ್ರಗಳು ಮುಚ್ಚಿದುದು ರೈತರ ದೌರ್ಭಾಗ್ಯ. ಹಿಂದೆ ಒಂದು ಸಂದರ್ಭದಲ್ಲಿ ಒಬ್ಬ ಪಶು ವೈದ್ಯಾಧಿಕಾರಿಯೇ ತಮ್ಮಲ್ಲಿ ಸರಿಯಾದ ಗರ್ಭಧಾರಣ ವ್ಯವಸ್ಥೆ ಇಲ್ಲದೆ ಇದ್ದುದರಿಂದ ರೈತರನ್ನು BAIFನವರ ಬಳಿ ಕಳಿಸಿದ್ದನ್ನು ನೋಡಿ ಅವರ ರೈತರ ಬಗ್ಗೆಯ ಪ್ರಾಮಾಣಿಕ ಕಳಕಳಿಯನ್ನು ಮೆಚ್ಚಿದ್ದೇನೆ. ಇದಕ್ಕೆ ತದ್ವಿರುದ್ಧವಾಗಿ, ಕೃತಕ ಗರ್ಭಧಾರಣೆಗಾಗಿ ದನವನ್ನು ತಂದ ರೈತ ಏನಾದರೂ ಅನ್ನಬಹುದೆಂಬ ಕಾರಣಕ್ಕೆ ಅವನಿಗೆ ತಿಳಿಸದೆ ಸರಿಯಾಗಿ ಕಾದಿಡದ ನಿಃಸತ್ವ ವೀರ್ಯವನ್ನು ದನಕ್ಕೆ ಒದಗಿಸಿ (ಅದು ಖಂಡಿತಾ ಗರ್ಭ ಧರಿಸುವುದಿಲ್ಲ ಎಂಬುದು ಖಾತರಿ) ಕಳಿಸಿದ ವೈದ್ಯರನ್ನೂ ಕಂಡಿದ್ದೇನೆ. ಇವೆಲ್ಲವನ್ನೂ ಕಂಡಾಗ BAIF ಬಹಳ ಉತ್ತಮವಾಗಿ ಸೇವೆ ಸಲ್ಲಿಸುತ್ತಿದ್ದುದು ನಿರ್ವಿವಾದ. ಜಯಪುರದ ಪಶು ವೈದ್ಯಾಧಿಕಾರಿಗಳಾದ ಡಾ|| ವೀರಭದ್ರಪ್ಪನವರಿಗೆ ಡೈರಿ ಅಭಿವೃದ್ಧಿ ಬಗ್ಗೆ ಇರುವ ಪ್ರಾಮಾಣಿಕ ಕಳಕಳಿ, ರೈತರೊಂದಿಗೆ ಆಗಮಿಸಿ ಅವರು ಚರ್ಚಿಸಿದ ವಿಷಯಗಳನ್ನು ನೋಡಿದಾಗ, ಅಂತಹ ಒಬ್ಬ ಅಧಿಕಾರಿ ಹಾಸನ ಡೈರಿ ನಿಗಮದಲ್ಲಿದ್ದಿದ್ದರೆ! ಎಂದು ರೈತರಿಗೆ ಅನ್ನಿಸಿತು.

ಈಗ ಪ್ರಚಲಿತವಿರುವ ಸುದ್ದಿಯಂತೆ ಹಾಸನದವರು ಹಾಲು ಶೇಖರಣೆ ನಿಲ್ಲಿಸುತ್ತಾರಂತೆ ನಿಜವೆ? ಹಾಲಿನ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಹಾಲು ಸಂಗ್ರಹಿಸಲು ಹಾಸನ ಡೈರಿ ಅಧಿಕಾರಿಗಳು ಇದುವರೆವಿಗೂ ಏನು ಕ್ರಮ ಕೈಗೊಂಡಿರುತ್ತಾರೆ? ಶಿವಮೊಗ್ಗೆಯ ಡೈರಿಗೆ ಹಾಲನ್ನು ಸಂಗ್ರಹಿಸಲು ನಮ್ಮ ಮಲೆನಾಡಿನ ವ್ಯಾಪ್ತಿಗೆ ಅದು ಬರುವುದಿಲ್ಲವಂತೆ, ಹಾಸನದವರಿಗೆ ಸಾಧ್ಯವಿಲ್ಲ—ದಕ್ಷಿಣ ಕನ್ನಡ ಜಿಲ್ಲೆಯ ಹಾಲು ಉತ್ಪಾದಕರ ಸಂಘದವರು ಘಟ್ಟದ ಮೇಲೆ ಬರುವಂತಿಲ್ಲ. ಹೀಗಾಗಿ ರೈತರ ಸ್ಥಿತಿ ಡೋಲಾಯಮಾನವಾಗಿದೆ.

ಅಳಿವು – ಉಳಿವಿನ ಪ್ರಶ್ನೆ

ಇದು ಮಲೆನಾಡಿನ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗಬಲ್ಲ ಒಂದು ಉದ್ಯಮದ ಅಳಿವು–ಉಳಿವಿನ ಪ್ರಶ್ನೆ; ಕೇವಲ ಒಂದಿಬ್ಬರು ಭ್ರಷ್ಟ–ಅನಾಸಕ್ತ ಅಧಿಕಾರಿಗಳು ಎಲ್ಲೋ ಹವಾ ನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ತೀರ್ಮಾನ ತೆಗೆದುಕೊಳ್ಳುವ ವಿಷಯವಲ್ಲ. ಏಕೆಂದರೆ, ಹಳ್ಳಿಗಾಡಿನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವಂಥವು ಎನ್ನಲಾಗುವ ಆರ್ಥಿಕ ಬೆಳೆಗಳು (ಏಲಕ್ಕಿ, ಕಾಫಿ, ಕಾಳು ಮೆಣಸು ಇತ್ಯಾದಿ) ಜಮೀನು ಉಳ್ಳವರಿಗೆ ಮಾತ್ರ ಪ್ರಯೋಜನಕರವಾಗಿದ್ದರೆ, ಆಸ್ತಿ–ಪಾಸ್ತಿ ಏನೂ ಇಲ್ಲದ ಶೀರಾ ಕಡುಬಡವರಾದಿಯಾಗಿ ಇಡೀ ಹಳ್ಳಿಗಾಡಿಗೇ ಸಂಜೀವಿನಿಯಾಗಬಲ್ಲಂಥದು ಹೈನುಗಾರಿಕೆ. ಅದರಲ್ಲೂ ಅದಕ್ಕೆ ಇಷ್ಟು ಪ್ರಶಸ್ತವಾದ ವಾತಾವರಣ, ಅವಕಾಶದ ಸದುಪಯೋಗ ಪಡೆಯಬಲ್ಲ ರೈತಾಪಿ ಜನತೆ ಇವೆಲ್ಲ ಇರುವಾಗ ಗುಜರಾತಿನಂತೆ (ಅಮುಲ್ ಇತ್ಯಾದಿ) ಇಲ್ಲೂ ಕೂಡ ಕ್ಷೀರೋದ್ಯಮ ಅತಿ ಹೆಚ್ಚಿನ ಯಶಸ್ಸು ಸಾಧಿಸಬಹುದು. ಇಂಥದೊಂದು ಅಭಿವೃದ್ಧಿಗೆ ಊರುಗೋಲಾಗಬೇಕಾದ, ಮಾರ್ಗದರ್ಶಿಯಾಗಬೇಕಾದ ಸಂಸ್ಥೆಯ ಆತ್ಮಘಾತಕ ನೀತಿಯಿಂದ ಹಾಲು ಉತ್ಪಾದಕರ ಸಹನೆಯ ಪರೀಕ್ಷೆ ಇನ್ನು ಸಾಕು. ಇದುವರೆಗೆ ಭಾಷಣಗಳಲ್ಲಿ ಸುರಿಸಿದ ಹಾಲಿನ ಹೊಳೆ ಕೃತಿಗೆ ಇಳಿಯಬೇಕು.

ಈ ನಿಗಮದ ಯೋಜನೆಗಳನ್ನೇ ಮುಖ್ಯವಾಗಿ ನೆಚ್ಚಿಕೊಂಡು ನೂರಾರು ಸಂಖ್ಯೆಯ ಬಡ ಜನತೆ ಬ್ಯಾಂಕುಗಳಿಂದ ಐ. ಆರ್. ಡಿ.ಪಿ.ಯಲ್ಲಿ ಸಾಲ ಪಡೆದು ಹಸು–ಎಮ್ಮೆಗಳನ್ನು ಕೊಂಡುಕೊಂಡಿದ್ದರು. ಆದರೆ ಕರೆದ ಹಾಲಿಗೆ ಸೂಕ್ತ ಗಿರಾಕಿಯೇ ಇಲ್ಲದೆ ಅವರೆಲ್ಲ 'ನಿರ್ಗತಿಕ'ರಿಂದ 'ಸಾಲಗಾರ ನಿರ್ಗತಿಕ'ರಾದರು.

ಈಗಲೂ ಕಾಲ ಮಿಂಚಿಲ್ಲ. ಸಂಬಂಧಪಟ್ಟವರು ಸೂಕ್ತ ಕ್ರಮ ಕೈಗೊಂಡು ಕೆಲಸ ಪ್ರಾರಂಭಿಸಲಿ. ಹಾಲು ಉತ್ಪಾದಕರ ಸಂಪೂರ್ಣ ಸಹಕಾರದ ಭರವಸೆ ನೀಡುತ್ತೇವೆ. ಬಾಳೆಹೊನ್ನೂರಿನ ಶೈತ್ಯೀಕರಣ ಕೇಂದ್ರದ ಸಂಪೂರ್ಣ ಸಾಮರ್ಥ್ಯಕ್ಕೆ ಬೇಕಾಗುವಷ್ಟು ಹಾಲು ಪೂರೈಸುವ ಭರವಸೆ ನೀಡುತ್ತೇವೆ.

ಉತ್ತಮೇಶ್ವರ ಆಸ್ಪತ್ರೆಯಲ್ಲಿ ಕುಟುಂಬ ಯೋಜನಾ ಶಿಬಿರ

ಉತ್ತಮೇಶ್ವರ: ಇಲ್ಲಿ ಏ. 17ರಂದು ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆ ಶಿಬಿರ ನಡೆಯಿತು. ಬಾಳೆಹೊನ್ನೂರು ವೈದ್ಯಾಧಿಕಾರಿ ಡಾ|| ಮುಸಲೆ ಶಸ್ತ್ರ ಚಿಕಿತ್ಸೆ ನೆರವೇರಿಸಿದರು.

ಈ ಶಿಬಿರದಲ್ಲಿ ತಮ್ಮ ತಾಯಂದಿರ ಜೊತೆಗೆ ಬಂದಿದ್ದ ಮಕ್ಕಳಿಗೆ ಹಾಲಿನ ವ್ಯವಸ್ಥೆಯನ್ನು ವಿ. ಹಿಂ. ಪ. ಕಾರ್ಯದರ್ಶಿ ಯು. ವಿ. ರಾಮರಾವ್ ಮತ್ತು ಗ್ರಾಮ ಲೆಕ್ಕಿಗರಾದ ನಾಗರಾಜ್ ಮಾಡಿದ್ದರು.

ನೇಮಕ

ಇಲ್ಲಿನ ಸರ್ಕಾರಿ ಆಸ್ಪತ್ರೆಗೆ ಒಬ್ಬರು ಮಹಿಳಾ ಆರೋಗ್ಯ ಕಾರ್ಯಕರ್ತೆಯವರನ್ನು ಈಚೆಗೆ ನೇಮಿಸಲಾಗಿದೆ. ಇಲ್ಲಿ ಈ ಹುದ್ದೆಯಲ್ಲಿ ಬಹಳ ಸಮಯದಿಂದ ಯಾರೂ ಇಲ್ಲದಿದ್ದ ಬಗ್ಗೆ ಈ ಹಿಂದೆ 'ಮುಂಜಾವು' ಪ್ರಕಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು

ಸಾಗರ ಅಡಿಕೆ ಪೇಟೆ

ತಾ|| 26–4–1986

ಸಿಪ್ಪೆ ಗೋಟು	ರೂ. 603ರಿಂದ 829
ಚಾಲಿ	ರೂ. 1741ರಿಂದ 2017
ಆಪಿ	ರೂ. 3001ರಿಂದ 3429

ಶಿವಮೊಗ್ಗ ಅಡಿಕೆ ಪೇಟೆ

ತಾರೀಖು: 25.4.86

ಸರಕು :	2800–3050
ಬೆಟ್ಟೆ :	1800–2200
ಗೊರಬಲು :	1000–1649
ಕಾಳು ಮೆಣಸು	—
ಸೀಗೇಕಾಯಿ	—

ಏಲಕ್ಕಿ ಧಾರಣೆ

ವ್ಯಾಪಾರದ ತಾರೀಖು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
ಸಕಲೇಶಪುರ		
31.3.86	175	106
1 4.86	187	106
2.4.86	176	96
4.4.86	211	113
ಸಿದ್ದಾಪುರ		
31.3.86	181	103
ಶಿರ್ಸಿ		
2.4.86	136	95

ಪುರಸಭೆ ವಿಸ್ತರಣಕ್ಕೆ ಹತ್ತು ಎಕ್ರೆ ಮಂಜೂರು

ಕೊಪ್ಪ: ಕೊಪ್ಪ ಪುರಸಭೆಯ ವಿಸ್ತರಣಕ್ಕೆ ಮೇಲಿನಪೇಟೆ ಸಮೀಪ 10 ಎಕ್ರೆ ಜಾಗವನ್ನು ಸರ್ಕಾರ ಮಂಜೂರು ಮಾಡಿದ್ದು ಇದನ್ನು ನಿವೇಶನಗಳಾಗಿ ಪರಿವರ್ತಿಸಿ ಅಭಿವೃದ್ಧಿಗೊಳಿಸಲು ಜಿಲ್ಲಾಧಿಕಾರಿಗಳು ಮೂರುವರೆ ಲಕ್ಷ ರೂ.ಗಳ ಆರ್ಥಿಕ ನೆರವು (ಸೀಡ್ ಕ್ಯಾಪಿಟಲ್) ನೀಡಿದ್ದಾರೆ. ಇದರ ಕಾಮಗಾರಿ ಆರಂಭಿಸಲಾಗಿದೆ ಎಂದು ಪುರಸಭೆ ಅಧ್ಯಕ್ಷರು 'ಶೃಂಕೊನ'ಕ್ಕೆ ತಿಳಿಸಿದ್ದಾರಂತೆ.

'ಸಪ್ತಶ್ರೀ'ಗೆ ನೂತನ ಪದಾಧಿಕಾರಿಗಳು

ನರಸಿಂಹರಾಜಪುರ: ಇಲ್ಲಿನ ಸದಭಿರುಚಿಯ ಹವ್ಯಾಸಿ ಸಾಂಸ್ಕೃತಿಕ ಕೂಟವಾದ 'ಸಪ್ತಶ್ರೀ' ಹವ್ಯಾಸಿ ರಂಗದ 1986–87ನೇ ಸಾಲಿನ ಪದಾಧಿಕಾರಿಗಳು : ಕೆ.ವಿ. ಪ್ರಭಾಕರ್ (ಅಧ್ಯಕ್ಷ); ಎಜಾಸ್ ಅಹಮದ್ (ಉಪಾಧ್ಯಕ್ಷ); ಡಿ. ಎಸ್. ವಿಜಯ ಕುಮಾರ್ (ಕಾರ್ಯದರ್ಶಿ); ಟಿ. ಸದಾನಂದ ಶೆಟ್ಟಿ (ಖಜಾಂಚಿ); ಎ. ರಘುಪತಿ ತುಂಗ (ಸಂಚಾಲಕ)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀವಟಿಗೆ ಅಚ್ಚುಕೂಟ, ಕೊಪ್ಪ.